ಸಾಕ್ಷಿಗೆ ದಿನಾಂಕಃ 22-07-2025ರಂದು ಪ್ರಮಾಣ ವಚನ ಭೋಧಿಸಲಾಯಿತು .

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಇರುವುದಿಲ್ಲ.

**ಪಾಟೀ ಸವಾಲುಃ ಮಾನ್ಯ ವಿಶೇಷ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ದಿಃ 10-03-2025 ರಂದು ನನ್ನ ಮುಖ್ಯ ವಿಚಾರಣೆಯಲ್ಲಿ ಪೊಲೀಸರಿಗೆ ಜಾಕೀಟನ್ನು ಹಾಜರುಪಡಿಸಿರುತ್ತೇನೆ ಎಂದು ಮರು ಹೇಳಿಕೆಯಲ್ಲಿ ನಮೂದಿಸಿರುವುದಾಗಿ ಸಾಕ್ಷ್ಯ ನುಡಿದಿರುವುದು ಸರಿಯಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು - ಆರೋಪಿತರ ಪರ ಶ್ರೀ ಕೆ ಎಸ್ ಜಿ ವಕೀಲರಿಂದ –**

ನಿಪಿ-1ನ್ನು ನನ್ನ ಹೇಳಿಕೆಯಂತೆ ಕಂಪ್ಯೂಟರ್ ನಲ್ಲಿ ಟೈಪ್ ಮಾಡಿರುತ್ತಾರೆ. ಅವರ ಹೆಸರನ್ನು ನನಗೆ ಹೇಳಲಾಗುವುದಿಲ್ಲ, ನಿಪಿ-1 ರಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಚಾಸಾ-4 ರವರ ವಿರುದ್ಧ ಆರೋಪಿತರು ದಾಖಲಿಸಿದ ಸಿಸಿ ನಂ 1083/2023 ರ ಪ್ರಕರಣ ವಿಚಾರಣೆಗೆ ಇದೇ ನ್ಯಾಯಾಲಯದಲ್ಲಿ ಬಾಕಿ ಇದೆ ಎಂದರೆ ಸರಿ. ನಮ್ಮ ಮನೆಯ ಮುಂದೆ ಮಾಡುತ್ತಿದ್ದ ಚರಂಡಿ ಕೆಲಸವನ್ನು ನಾವೇ ನಿಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ ಕೆಲಸವನ್ನು ನಿಲ್ಲಿಸಿದ ಪರಿಣಾಮ ನಮ್ಮ ಬೀದಿಯಲ್ಲಿರುವ ವಾಸಿಗಳಿಗೆ ತೊಂದರೆಯಾಗಿರುತ್ತದೆ ಎಂದರೆ ಸರಿ. ಗಲಾಟೆ ನಡೆದ ಸಮಯಕ್ಕೆ ಚಾಸಾ-4 ಸ್ಥಳದಲ್ಲಿರಲಿಲ್ಲ ಎಂದರೆ ಸರಿಯಲ್ಲ. 4ನೇ ಆರೋಪಿ ಗಲಾಟೆ ನಡೆದಾಗ ಸ್ದಳದಲ್ಲಿರಲಿಲ್ಲ ಎಂದರೆ ಸರಿಯಲ್ಲ. 4ನೇ ಆರೋಪಿ ಸದರಿ ದಿನಾಂಕದಂದು ಬೆಂಗಳೂರಿನ ಜಯನಗದ ಮಹಾತ್ಮ ಗಾಂಧಿ ವಿಶ್ವ ವಿದ್ಯಾನಿಲಯದಲ್ಲಿ ಪರೀಕ್ಷೆ ಬರೆಯುತ್ತಿದ್ದ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆಯಲ್ಲಿರುವ ಪೊಟೋದಲ್ಲಿ ಕಾಣಿಸುತ್ತಿರುವ ವ್ಯಕ್ತಿಯೇ ಮಂಜುನಾಥ ಎಂದರೆ ಸರಿ.

(ಸದರಿ ದಾಖಲೆಯನ್ನು ನಿಶಾನೆಗೊಳಪಡಿಸಲು ಮಾನ್ಯ ವಿಶೇಷ ಸಹಾಯಕ ಅಭಿಯೋಜಕರು ತಕರಾರು ತೆಗೆದಿರುತ್ತಾರೆ).

(ಸದರಿ ದಾಖಲೆ 4 ನೇ ಅರೋಪಿಗೆ ಸಂಬಂಧಿಸಿದ ಹಾಲ್ ಟಿಕೇಟ್ ಆದ ಕಾರಣ ಸದರಿ ದಾಖಲೆಯನ್ನು ಅರೋಪಿ ಪರ ವಕೀಲರು ಸಾಕ್ಷಿಗೆ ತೋರಿಸಿದ್ದು ಸಾಕ್ಷಿ ಸದರಿ

ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಸದರಿ ವಿಶೇಷ ಸಹಾಯಕ ಅಭಿಯೋಜಕರ ತಕರಾರನ್ನು ತಳ್ಳಿಹಾಕಲಾಯಿತು.)

ಸದರಿ ದಾಖಲೆ ದಿಃ01-03-2023ರ 4ನೇ ಆರೋಪಿಯ 2ನೇ ಬಿಎಸ್‌ಸಿ ನರ್ಸಿಂಗ್ ನ ಹಾಲ್ ಟಿಕೇಟ್ ಮತ್ತು ವೇಳಾಪಟ್ಟಿಯ ಪ್ರತಿಯಾಗಿದ್ದು ಸಾಕ್ಷಿ ಸದರಿ ದಾಖಲೆಯಲ್ಲಿನ ಆರೋಪಿಯ ಭಾವಚಿತ್ರವನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಡಿ-1 ಎಂದು ಗುರುತಿಸಲಾಯಿತು.

4ನೇ ಆರೋಪಿ ಸದರಿ ದಿನದಂದು ಬೆಂಗಳೂರಿನಲ್ಲಿ ಪರೀಕ್ಷೆ ಬರೆಯುತ್ತಿದ್ದರು ಸಹ ನಾನು ಅತನ ವಿರುದ್ದ ದುರುದ್ದೇಶದಿಂದ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ನಿಪಿ-1 ರಲ್ಲಿ ನನ್ನ ಎದೆಗೆ ಮತ್ತು ತೊಡೆಗೆ ಹೀನಾಮಾನವಾಗಿ ಕಾಲಿನಿಂದ ಮತ್ತು ಕೈಯಿಂದ ಹೊಡೆದಿಲ್ಲದೆ ನನ್ನ ಜಾಕೀಟು ಮತ್ತು ಸೀರೆಯನ್ನು ಎಳೆದಾಡಿ ಹೊಡೆದಿರುತ್ತಾರೆ ಎಂದು ನಮೂದಿಸಿದ್ದು ಅ ರೀತಿ ಹಲ್ಲೆ ಮಾಡಿದವರು ಯಾರು ಎಂದರೆ ಸಾಕ್ಷಿ 1 ರಿಂದ 6ನೇ ಅರೋಪಿತರು ಹಲ್ಲೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ 6 ಜನ ಆರೋಪಿತರು ನಾನು ತೊಟ್ಟಿದ್ದ ಜಾಕೀಟನ್ನು ಎಳೆದಾಗ ಸದರಿ ಜಾಕೀಟ ಹರಿದಿತ್ತೆ ಎಂದರೆ ಸಾಕ್ಷಿ ಹರಿದಿತ್ತು ಎಂದು ನುಡಿಯುತ್ತಾರೆ. ಸದರಿ ಹರಿದ ಜಾಕೀಟನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನಾವು ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಹಲ್ಲೆಯಿಂದ ನಾನು ತೊಟ್ಟಿದ್ದ ಬಟ್ಟೆ ಹರಿದು ಭದ್ರವಾಗಿರುತ್ತದೆ. ಆರೋಪಿತರು ನನ್ನ ಮೇಲೆ ಯಾವುದೇ ಹಲ್ಲೆ ಮಾಡಿಲ್ಲ ಮತ್ತು ಅದರಿಂದ ನಾನು ತೊಟ್ಟಿದ್ದ ಯಾವುದೇ ಹರಿದಿಲ್ಲದೆ ಇದ್ದರು ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ಗೊಪ್ಪೇನಹಳ್ಳಿ ಗ್ರಾಮದಲ್ಲಿಯೂ ಸಹ ಸರ್ಕಾರಿ ಆಸ್ಪತ್ರೆ ಇದೆ ಎಂದರೆ ಸರಿ. ನಾನು ನನ್ನ ಗಂಡನಿಂದ ಬೇರೆಯಾಗಿ ನನ್ನ ಮಗನೊಂದಿಗೆ ಪ್ರತ್ಯೇಕವಾಗಿ ವಾಸವಾಗಿದ್ದೆನೆ ಎಂದರೆ ಸರಿ. ಆರೋಪಿತರು ನನ್ನಿಂದ ತಾಳಿ ಮತ್ತು ಓಲೆಯನ್ನು ಕಿತ್ತುಕೊಂಡಿರುತ್ತಾರೆ ಎಂದು ದೂರಿನಲ್ಲಿ ನಮೂದಿಸಿದ್ದು ಸದರಿ ತಾಳಿ ಮತ್ತು ಓಲೆ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ. ಸದರಿ ತಾಳಿ ಮತ್ತು ಓಲೆ ಎಷ್ಟುತೂಕದೆಂದು ನನಗೆ ಹೇಳಲಾಗುವುದಿಲ್ಲ. ಸಾಮಾನ್ಯವಾಗಿ ತಾಳಿಯನ್ನು

ಕಿತ್ತಾಗ ಅದರೊಂದಿಗೆ ಇರುವ ಕರಿಮಣಿಗಳು ನೆಲದಮೇಲೆ ಬೀಳುವ ಸಂಭವವಿರುತ್ತದೆ ಎಂದರೆ ಸರಿ.

7ನೇ ಅರೋಪಿ ಗುತ್ತಿಗೆದಾರ ಉಳಿದ ಆರೋಪಿತರಿಗೆ ಹೇಳಿಕೊಟ್ಟು ನಮ್ಮ ಮೇಲೆ ಕೊಲೆ ಮಾಡಿಸಲು ಸಂಚು ರೂಪಿಸಿ ನಮ್ಮ ಜಾತಿಯವರಿಂದಲೇ ಹೊಡೆಸಿ ಬೈಸಿರುತ್ತಾರೆ ಎಂದು ನಿಪಿ-1 ರಲ್ಲಿನಮೂದಿಸಿದ್ದು ಸದರಿ ಆರೋಪಿ ಸದರಿ ಹೇಳಿಕೆಯನ್ನುನೀಡಿದ ಬಗ್ಗೆ ನನಗೆ ಹೇಗೆ ಮತ್ತು ಯಾರಿಂದತಿಳಿಯಿತು ಎಂದರೆ ಸಾಕ್ಷಿ 1ನೇ ಅರೋಪಿ ಫೋನ್ ನಲ್ಲಿ ಮಾತನಾಡುತ್ತಿದ್ದಾಗ ತಿಳಿಯಿತು ಎಂದು ನುಡಿಯುತ್ತಾರೆ, ಸದರಿಯವರು ಸದರಿ ಸಂಭಾಷಣೆಯನ್ನು ಯಾವ ಸಮಯ ಮತ್ತು ಯಾವ ದಿನಾಂಕಂದು ಮಾಡುತ್ತಿದ್ದರು ಎಂದು ನನಗೆ ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ.

(ಮಧ್ಯಾಹ್ನ ಊಟದ ಸಮಯವಾದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮದ್ಯಾಹ್ನಕ್ಕೆ ಮುಂದೂಡಲಾಯಿತು).

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ,ಚನ್ನಗಿರಿ.**

ಸಾಕ್ಷಿಯನ್ನು ಪುನಃ ದಿನಾಂಕಃ 22-07-2025 ರಂದು ಮಧ್ಯಾಹ್ನ 4.45 ಕ್ಕೆ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

**ಮುಂದುವರಿದ ಪಾಟೀ ಸವಾಲು - ಆರೋಪಿತರ ಪರ ಶ್ರೀ ಕೆ ಎಸ್ ಜಿ ವಕೀಲರಿಂದ –**

ನಾನು ದೂರನ್ನು ದಿಃ 02-03-2023ರಂದು ದಾಖಲಿಸಿರುತ್ತೇನೆ. ಸದರಿ ದೂರನ್ನು ಎಷ್ಟು ಗಂಟೆಗೆ ಕೊಟ್ಟಿರಿ ಎಂದರೆ ಸಾಕ್ಷಿ ಸದರಿ ದೂರನ್ನು ಕೊಡಲು ಬಂದಾಗ ನಮ್ಮನ್ನು ಪೊಲೀಸರು ಪಡೆಯದೇ ಠಾಣೆಯಲ್ಲೆ ಕೂರಿಸಿರುತ್ತಾರೆ. ನನಗೆ ನಿರ್ದಿಷ್ಟ ಸಮಯ

ಹೇಳಲಾಗುವುದಿಲ್ಲ, ಸದರಿ ದೂರನ್ನು ಸಂಜೆ  ದಾಖಲಿಸಿರುತ್ತೇನೆ. ನನ್ನ ಕಿವಿಯ ಓಲೆಯನ್ನು ನಿರ್ದಿಷ್ಟವಾಗಿ ಯಾವ ಆರೋಪಿ ಕಿತ್ತರು ಎಂದು ನನಗೆ ಹೇಳಲಾಗುವುದಿಲ್ಲ. ಗಲಾಟೆ ನಡೆದ ದಿನದಂದೇ ನನ್ನ ಓಲೆಯನ್ನು ಸಹ ಕಿತ್ತಿರುತ್ತಾರೆ. ಸಾಮಾನ್ಯವಾಗಿ ಕಿವಿಯಲ್ಲಿ ಹಾಕಿದ್ದ ಓಲೆಯನ್ನು ಕಿತ್ತಾಗ ಕಿವಿ ಹರಿದು ರಕ್ತಗಾಯವುಂಟಾಗುವ ಸಂಭವವಿರುತ್ತದೆ ಎಂದರೆ ಸರಿ. ಸದರಿ ವಿಚಾರವಾಗಿ ನಾನು ವೈದ್ಯರಿಂದ ಚಿಕಿತ್ಸೆ ಪಡೆಯುವ ಸಮಯಕ್ಕೆ ಸದರಿ ವಿಚಾರವನ್ನು ವೈದ್ಯರಿಗೆ ಹೇಳಿಕೆ ನೀಡಿರುತ್ತೇನೆ.

ದೂರನ್ನು ದಾಖಲಿಸಲು ಠಾಣೆಗೆ ಬಂದಾಗ 6,8 ಮತ್ತು 9 ನೇ ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿದ ಕುರಿತು ನಿಪಿ-1 ರಲ್ಲಿ ಉಲ್ಲೇಖಿಸಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಗಲಾಟೆ ಹಿನ್ನೆಲೆಯಲ್ಲಿ ಠಾಣೆಗೆ 2-3 ಸಾರಿ ಬಂದಿರುತ್ತೇನೆ. ನಾನು ದೂರನ್ನು ದಾಖಲಿಸಿದ ತರುವಾಯ ಠಾಣೆಗೆ 3-4 ಬಾರಿ ಬಂದಿರುತ್ತೇನೆ ಸದರಿ ದೂರನ್ನು ದಾಖಲಿಸಿದ ತರುವಾಯ ಎಷ್ಟ ದಿನಗಳ ತರುವಾಯ ನಾನು ಠಾಣೆಗೆ ಬಂದಿರುತ್ತೇನೆ ಎಂದು ನನಗೆ ನಿಖರವಾಗಿ ಹೇಳಲಾಗುವುದಿಲ್ಲ. ನಾನು ಠಾಣೆಯಲ್ಲಿ ಎಷ್ಟು ದಾಖಲೆಗೆ ಸಹಿ ಮಾಡಿರುತ್ತೇನೆ ಎಂದು ನನಗೆ ಹೇಳಲಾಗುವುದಿಲ್ಲ.

ನಿಪಿ-1 ರ ತರುವಾಯ ಪೊಲೀಸರು ಮಾರನೇ ದಿನ ನಮ್ಮ ಮನೆಯ ಬಳಿ ಬಂದಿರುತ್ತಾರೆ. ಸದರಿಯವರು ಏನನ್ನು ಬರೆದರು ಎಂದು ನನಗೆ ಮಾಹಿತಿ ಇಲ್ಲ. ಪೊಲೀಸರು ಮಹಜರಿಗೆ ಬಂದಾಗ ನನ್ನೊಂದಿಗೆ ಬಂದಾಗ ಚಾಸಾ-2 ಮತ್ತು 3 ರವರು ಹಾಜರಿದ್ದು ಸದರಿ ದಾಖಲೆಗೆ ಸಹಿ ಮಾಡಿರುತ್ತಾರೆ. ನಿಪಿ-3 ಮತ್ತು 4 ನ್ನು ಯಾರು ತೆಗೆದರು ಎಂದು ನನಗೆ ಹೇಳಲಾಗುವುದಿಲ್ಲ. ನಿಪಿ-1ರ ತರುವಾಯ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಮನೆಯ ಬಳಿ ಹೇಳಿಕೆ ಕೊಟ್ಟಿರುತ್ತೆನೆ ಎಂದು ನುಡಿಯುತ್ತಾರೆ.

ಆರೋಪಿತರ ಯಾವುದೇ ತಪ್ಪು ಮಾಡದೇ ಇದ್ದರು ಸಹ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ,ಚನ್ನಗಿರಿ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ.**1766/2023**

ಹೆಸರುಃ ಪ್ರೇಮಾ ಚಾಸಾಃ 1

ಗಂಡಃ ರಂಗಪ್ಪ ಪ್ರಾಸಾ: 1

ವಯಸ್ಸುಃ 45 ವರ್ಷ

ಉದ್ಯೋಗಃ ಕೂಲಿ

ವಾಸ ಸ್ಥಳಃ ಗೊಪ್ಪೇನಹಳ್ಳಿ ಗ್ರಾಮ , ಚನ್ನಗಿರಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 10-03-2025 ರಂದು ಪ್ರಮಾಣ ವಚನ ಭೋಧಿಸಲಾಯಿತು .

**ಮುಖ್ಯ ವಿಚಾರಣೆಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಚಾಸಾ 2 ಮತ್ತು 3, 6 ರಿಂದ 8 ರವರು ಪರಿಚಯಸ್ಥರು. ಚಾಸಾ 4 ನನ್ನ ಮಗ . ಚಾಸಾ 5 ನನ್ನ ತಮ್ಮ . ಚಾಸಾ 9 ನನ್ನ ತಂದೆ . ಆರೋಪಿತರು ಪರಿಚಯಸ್ಥರು. ದಿಃ 01-03-2023 ರಂದು ಚರಂಡಿ ಕಾರ್ಯ ನಿರ್ವಹಿಸಲು ಕೆಲಸಗಾರರು ಬಂದಿದ್ದಾಗ, ಚರಂಡಿ ಕೆಲಸವನ್ನು ನಮ್ಮ ಮನೆಯ ಬಳಿ ನೋಡಿ ಮಾಡುವಂತೆ ನಾನು ತಿಳಿಸಿರುತ್ತೇನೆ. ಆಗ 7ನೇ ಆರೋಪಿಗೆ ತಿಳಿಸುವಂತೆ ಹೇಳಿರುತ್ತೇನೆ. ಚರಂಡಿ ಕೆಲಸ ನಿರ್ವಹಿಸುತ್ತಿದ್ದ ಕೆಲಸಗಾರರು 7ನೇ ಆರೋಪಿಗೆ ಸದರಿ ವಿಚಾರವನ್ನು ತಿಳಿಸುವಂತೆ ನುಡಿದು ಅವರ ದೂರವಾಣಿ ಸಂಖ್ಯೆಯನ್ನು ನನಗೆ ನೀಡಿರುತ್ತಾರೆ. ನಾನು ಚಾಸಾ 4ರ ವರಿಗೆ 7ನೇ ಆರೋಪಿಯ ದೂರವಾಣಿ ನಂಬರನ್ನು ನೀಡಿರುತ್ತೇನೆ. ಚಾಸಾ 4 ರವರು ಚಾಸಾ 5 ರವರಿಗ ದೂರವಾಣಿ ನಂಬರನ್ನು ನೀಡಿರುತ್ತಾರೆ.

6-00 ಗಂಟೆಯ ಸಮಯಕ್ಕೆ ಚಾಸಾ 6 ರವರು ಸ್ಥಳಕ್ಕೆ ಬಂದಿರುತ್ತಾರೆ. ಚರಂಡಿ ಕೆಲಸವನ್ನು ಸರಿಯಾಗಿ ಮಾಡುವಂತೆ ನಾನು 7ನೇ ಆರೋಪಿಗೆ ಹೇಳುತ್ತೇನೆ ಎಂದು ನಮಗೆ ತಿಳಿಸಿ ಹೋಗಿರುತ್ತಾರೆ. ರಾತ್ರಿ 9 -00 ಗಂಟೆ ಸಮಯಕ್ಕೆ ಆರೋಪಿತರೆಲ್ಲರೂ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ ಮನೆಯ ಬಳಿ ಬಂದಾಗ ಊಟಕ್ಕೆ ಕುಳಿತಿದ್ದ ನಾನು ಹಾಗೂ ಚಾಸಾ

4 ರವರಲ್ಲಿ ನಾನು ಏನೆಂದು ನೋಡಲು ಹೊರಗೆ ಹೋದಾಗ ನನ್ನ ಮೈಮೇಲಿದ್ದ ಬಟ್ಟೆಯನ್ನು ಹಿಡಿದು ಎಳೆದಾಡಿ ಬಟ್ಟೆಯನ್ನೆಲ್ಲಾ ಕಿತ್ತು ಹೊಡೆದಿರುತ್ತಾರೆ. ಆರೋಪಿತರು ಎದೆಗೆ ಹೊಟ್ಟೆಗೆ ತೊಡೆಗೆ ಬೆನ್ನಿಗೆ ಹೊಡೆದು ಕೂದಲನ್ನು ಹಿಡಿದು ಎಳೆದಾಡಿರುತ್ತಾರೆ. ಗಲಾಟೆಯನ್ನು ಬಿಡಿಸಲು ಬಂದ ಚಾಸಾ 4 ರವರಿಗೂ ಆರೋಪಿತರು ಹೊಡೆದಿರುತ್ತಾರೆ. ಆರೋಪಿತರು ಕೊಲೆ ಬೆದರಿಕೆ ಹಾಕಿರುತ್ತಾರೆ. ನಂತರ ಚನ್ನಗಿರಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಬಂದಿರುತ್ತೇವೆ. ದಿಃ 02-03-2023 ರಂದು ಠಾಣೆಗೆ ಹಾಜರಾಗಿ ದೂರು ಸಲ್ಲಿಸಿರುತ್ತೇನೆ. ಸಾಕ್ಷಿಯು ಈಗ ಒಂದು ದಾಖಲೆಯನ್ನು ನೋಡುತ್ತಿದ್ದು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ದೂರನ್ನು ನಿಶಾನೆ.ಪಿ.1 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು . ಠಾಣೆಯ ಮುಂಭಾಗದಲ್ಲಿ 6, 8 ಮತ್ತು 9 ನೇ ಆರೋಪಿತರು ನನಗೂ ಹಾಗೂ ಚಾಸಾ 4 ರವರಿಗೆ ಹೊಡೆದಿರುತ್ತಾರೆ. ಸದರಿ ಗಲಾಟೆಯನ್ನು ಚಾಸಾ 5, 7 ರಿಂದ 9 ರವರು ಬಿಡಿಸಿರುತ್ತಾರೆ.

ನಂತರ ದಿಃ 03-3-2023 ರಂದು ಪೊಲೀಸರು ಕೃತ್ಯ ನಡೆದ ಸ್ಥಳಕ್ಕೆ ಬಂದು ಪಂಚನಾಮೆಯನ್ನು ಬೆಳಗ್ಗೆ 10-30 ರಿಂದ 11-00 ಗಂಟೆಯವರೆಗೆ ಜರುಗಿಸಿರುತ್ತಾರೆ. ಪಂಚನೆಮಯ ಕಾಲಕ್ಕೆ ನನ್ನ ಜೊತೆ ಚಾಸಾ 2 ಮತ್ತು 3 ರವರು ಹಾಜರಿದ್ದರು. ಸದರಿ ಮಹಜರ್ ನ್ನು ನಿಶಾನೆ.ಪಿ.2 ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ.ಪಿ.2 (ಎ) ಎಂದು ಗುರುತಿಸಲಾಯಿತು.

ಮಹಜರ್ ಸಮಯದಲ್ಲಿ ಪೊಲೀಸರು ಎರಡು ಭಾವಚಿತ್ರವನ್ನು ತೆಗೆದಿರುತ್ತಾರೆ . ಸದರಿ ಭಾವಚಿತ್ರವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ . ಸದರಿ ಭಾವಚಿತ್ರವನ್ನು ನಿಪಿ.3 ಮತ್ತು 4 ಎಂದು ಕ್ರಮವಾಗಿ ಗುರುತಿಸಲಾಯಿತು .

ಮರುಹೇಳಿಕೆಯ ಕಾಲಕ್ಕೆ ನಾನು ಹಾಜರುಪಡಿಸಿದ ಜಾಕೀಟನ್ನು ಪೊಲೀಸರು ಪಡೆದಿರುತ್ತಾರೆ. ನಾನು ಮರುಹೇಳಿಕೆಯನ್ನು ನೀಡಿರುತ್ತೇನೆ.

ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನು ಸಾಕ್ಷಿಯು ನೋಡಿ ಗುರುತಿಸಿದ್ದು 8ನೇ ಆರೋಪಿಯು ಗೈರು ಹಾಜರಿದ್ದು ಆರೋಪಿ ಪರ ವಕೀಲರ ಸಮ್ಮತಿಯೊಂದಿಗೆ ಗುರುತಿಸಿರುತ್ತಾರೆ.

ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಯಿತು.

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**
**ಚನ್ನಗಿರಿ**.